೧	೨	೩
೫೫	ಧಾರವಾಡ ಜಿಲ್ಲೆಯ ಮುಂಡಗಿ ಪೋಲೀಸ್ ಠಾಣೆ ಗುನ್ನೆ ಸಂಖ್ಯೆ. ೮೦/೮೪ರಲ್ಲಿ ಗೂಳೇನ್‌ಸಾಬ್ ಪೀರಾಸಾಬ ಬಾಗಲಿ ಮತ್ತಿತರ ೨೧ ಜನರ ಮೇಲೆ ಹೂಡಲಾದ ಮೊಕದ್ದಮೆಯನ್ನು ವಾಪಸ್ಸು ಪಡೆಯುವ ಬಗ್ಗೆ (ಸಿಸಿ ನಂ. ೨೧೮/೮೫).	ಹೆಚ್‌ಡಿ ೫೦ ಕೆಡಬ್ಲ್ಯೂಪಿ ೮೫ ದಿನಾಂಕ ೯-೨-೧೯೮೭.
೫೬	ರಾಯಚೂರು ಜಿಲ್ಲೆಯ ಪಶ್ಚಿಮ ಪೋಲೀಸ್ ಠಾಣೆಯ ಗುನ್ನೆ ಸಂಖ್ಯೆ. ೧೦೬/೮೩ ರಲ್ಲಿ ಶ್ರೀ ಎಸ್. ಎಂ. ಸಯೀಮುದ್ದೀನ್ ಮತ್ತಿತರ ೩ ಜನರ ಮೇಲೆ ಹೂಡಲಾದ ಮೊಕದ್ದಮೆಯನ್ನು ವಾಪಸ್ಸು ಪಡೆಯುವ ಬಗ್ಗೆ (ಸಿಸಿ ನಂ. ೧/೮೫).	ಹೆಚ್‌ಡಿ ೫೧ ಕೆಪಿಡಬ್ಲ್ಯೂಪಿ ೮೫ ದಿನಾಂಕ ೬-೬-೧೯೮೭.
೫೭	ಬೆಂಗಳೂರು ನಗರದಲ್ಲಿರುವ ಹೈಗ್ರೌಂಡ್ ಪೋಲೀಸ್ ಠಾಣೆ ಗುನ್ನೆ ಸಂಖ್ಯೆ. ೪೪೬/೮೪ರಲ್ಲಿ ಸ್ಟೈಪಂಡರಿ ಪದವೀಧರರ ಸಂಘದವರ ಮೇಲೆ ಹೂಡಲಾದ ಮೊಕದ್ದಮೆಯನ್ನು ವಾಪಸ್ಸು ಪಡೆಯುವ ಬಗ್ಗೆ (ಸಿಸಿ ನಂ. ೪೦೪೫/೮೪).	ಹೆಚ್‌ಡಿ ೭೪ ಕೆಡಬ್ಲ್ಯೂಪಿ ೮೪ ದಿನಾಂಕ ೯-೧-೧೯೮೭.
೫೮	ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಶಹರ ಪೋಲೀಸ್ ಠಾಣೆಯ ಗುನ್ನೆ ಸಂಖ್ಯೆ. ೩೨೪/೮೩ ಮತ್ತು ಹುಬ್ಬಳ್ಳಿ ವಂಟಿಗೆರಾ ಪೋಲೀಸ್ ಠಾಣೆ ಗುನ್ನೆ ಸಂಖ್ಯೆ. ೧೮೦/೮೩ರಲ್ಲಿ ಶ್ರೀ ಎಂ. ರಾಮರಾವ್ ಮತ್ತು ಇತರರು ಹಾಗೂ ಶ್ರೀ ಬಾಬಣ್ಣ ರಾಜೇಸಾಬ್ ಇಸ್ಲಾಮ್‌ಪುರ ಇವರುಗಳ ಮೇಲೆ ಹೂಡಲಾದ ಮೊಕದ್ದಮೆಯನ್ನು ವಾಪಸ್ಸು ಪಡೆಯುವ ಬಗ್ಗೆ (ಸಿಸಿ ನಂ. ೧೫/೮೪ ಮತ್ತು ೧೬೬೬/೮೪).	ಹೆಚ್‌ಡಿ ೭೯ ಕೆಡಬ್ಲ್ಯೂಪಿ ೮೫ ದಿನಾಂಕ ೧೦-೨-೧೯೮೭.
೫೯	ಮಂಡ್ಯ ಜಿಲ್ಲೆಯ ಬಸರಾಳು ಆರಕ್ಷಕ ಠಾಣೆ ಗುನ್ನೆ ಸಂಖ್ಯೆ. ೨೬/೮೪ರಲ್ಲಿ ಶ್ರೀ ದಾಸಪ್ಪ ಮತ್ತಿತರ ಮೇಲೆ ಹೂಡಲಾದ ಮೊಕದ್ದಮೆಯನ್ನು ವಾಪಸ್ಸು ಪಡೆಯುವ ಬಗ್ಗೆ (ಸಿಸಿ ನಂ. ೧೨೫/೮೫).	ಹೆಚ್‌ಡಿ ೯೦ ಕೆಡಬ್ಲ್ಯೂಪಿ ೮೫ ದಿನಾಂಕ ೪-೩-೧೯೮೭.

ರಾಜ್ಯದ ವಿವಿಧ ಇಲಾಖೆಗಳ ಅಧಿಕಾರಿಗಳ ಮತ್ತು ನೌಕರರ ಮನೆಗಳ ಮೇಲೆ ಲೋಕಾಯುಕ್ತ ಸಿ. ಬಿ. ಐ. ದಾಳಿಗಳನ್ನು ನಡೆಸಿ ವಶಪಡಿಸಿಕೊಂಡ ಸಂಪತ್ತಿನ ಬಗ್ಗೆ.

೧೯೩ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿವಿಧ ಇಲಾಖೆಗಳ ಎಷ್ಟು ಅಧಿಕಾರಿಗಳ ಮತ್ತು ನೌಕರರ ಮನೆಗಳ ಮೇಲೆ ಲೋಕಾಯುಕ್ತ, ಸಿ. ಬಿ. ಐ. ಧಾಳಿಗಳನ್ನು ನಡೆಸಲಾಗಿದೆ (ಈ ದಾಳಿಗಳಿಂದ ವಶಪಡಿಸಿಕೊಳ್ಳಲಾದ ಅಕ್ರಮ ಸಂಪತ್ತಿನ ಪ್ರತ್ಯೇಕ ವಿವರಗಳನ್ನು ಒದಗಿಸುವುದು),

ಆ) ಈ ಪೈಕಿ ಎಷ್ಟು ಪ್ರಕರಣಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ?

ಶ್ರೀ ರಾಮಕೃಷ್ಣ ಹೆಗಡೆ (ವಾಣಿಜ್ಯ ಮಂತ್ರಿಯವರು).—

ಅ) ಏಪ್ರಿಲ್ ೧೯೮೪ ರಿಂದ ಜುಲೈ ೧೯೮೭ರವರೆವಿಗೆ ಲೋಕಾಯುಕ್ತವು ದಾಳಿ ಮಾಡಿದ ಪ್ರಕರಣಗಳ ಸಂಖ್ಯೆ. ೪೧

೧. ಅಧಿಕಾರಿಗಳು ೨೬

೨. ನೌಕರರು ೧೫

ವಶಪಡಿಸಿಕೊಳ್ಳಲಾದ ಸಂಪತ್ತಿನ ವಿವರಗಳು ಈ ಕೆಳಕಂಡಂತಿವೆ.

೧) ಚಿನ್ನದ ಒಡವೆಗಳು—ಸುಮಾರು ೩೪ ಕಿ. ಗ್ರಾಂ.

೨) ಬೆಳ್ಳಿಯ ಸಾಮಾನುಗಳು ಸುಮಾರು ೨೨ ಕಿ. ಗ್ರಾಂ.

೩) ನಗದು ಹಣ ರೂ. ೬,೨೩,೫೦೦–೦೦

೪) ನಗದು ಪತ್ರಗಳು ಮತ್ತು ರಾಷ್ಟ್ರೀಯ ಉಳಿತಾಯ ಮಂತ್ರಿತರೆ ಪತ್ರಗಳು ರೂ. ೬,೪೫,೨೦೦–೦೦

೫) ಇತರೆ ಬೆಲೆ ಬಾಳುವ ವಸ್ತುಗಳು ರೂ. ೪೨,೦೦೦–೦೦

ಆ) ೯ ಪ್ರಕರಣಗಳು.

ಪ್ರಾಥಮಿಕ ಆರೋಗ್ಯ ಘಟಕ ಆರೋಗ್ಯ ಕೇಂದ್ರಗಳಾಗಿ ಹಾಗೂ ಆರೋಗ್ಯ ಘಟಕಗಳನ್ನು ಆರೋಗ್ಯ ಉಪಕೇಂದ್ರಗಳಾಗಿ ಪರಿವರ್ತಿಸುವ ಬಗ್ಗೆ.

೧೯೨೨ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳನ್ನು '' ಪ್ರಾಥಮಿಕ ಆರೋಗ್ಯ ಕೇಂದ್ರ" ಗಳಾಗಿ ಹಾಗೂ ಆರೋಗ್ಯ ಘಟಕಗಳನ್ನು " ಆರೋಗ್ಯ ಉಪಕೇಂದ್ರಗಳಾಗಿ ಪರಿವರ್ತಿಸಲು ಸರ್ಕಾರ ದವರು ಕ್ರಮ ಕೈಗೊಂಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಈ ಪರಿವರ್ತನಾ ಕಾರ್ಯಗಳು ಯಾವ ಹಂತದಲ್ಲಿವೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಪ್ರಾಥಮಿಕ ಆರೋಗ್ಯ ಘಟಕಗಳನ್ನು ಹಂತ ಹಂತವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಗಳನ್ನಾಗಿ ಪರಿವರ್ತಿಸುವ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಆರೋಗ್ಯ ಘಟಕಗಳನ್ನು ಆರೋಗ್ಯ ಉಪಕೇಂದ್ರಗಳನ್ನಾಗಿ ಪರಿವರ್ತಿಸುವ ಯೋಜನೆ ಇರುವುದಿಲ್ಲ.

ಆ) ಭಾರತ ಸರ್ಕಾರವು ಕನಿಷ್ಠ ಅವಶ್ಯಕತೆ ಕಾರ್ಯಕ್ರಮದಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಗುರಿಯನ್ನು ಪ್ರತಿ ವರ್ಷವು ನಿಗದಿಪಡಿಸುತ್ತದೆ. ರಾಜ್ಯದಲ್ಲಿ ಹಾಲಿ ಇರುವ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಹಂತ ಹಂತವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಗಳನ್ನಾಗಿ ಪರಿವರ್ತಿಸುವ ಮೂಲಕ ಈ ಗುರಿಯನ್ನು ಸಾಧಿಸಲಾಗುತ್ತಿದೆ.

ಜಿಲ್ಲಾ ಪರಿಷತ್ತು ಕಾಯಿದೆ ಜಾರಿಗೆ ಬಂದಂದಿನಿಂದ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತಿಸುವ ಗುರಿಯನ್ನು ಜಿಲ್ಲಾ ಪರಿಷತ್ತುಗಳಿಗೆ ವಂರು ನಿಗದಿ ಮಾಡಿ ಅವರು ಅದನ್ನು ಅವಶ್ಯಕತೆಯನ್ನು ಗಮನಿಸಿ ಅನುಷ್ಠಾನಗೊಳಿಸುವಂತೆ ತಿಳಿಸಲಾಗಿದೆ.